**2016ರ ಸೆಲ್ಕೋ ಸೂರ್ಯಮಿತ್ರ ಪ್ರಶಸ್ತಿಗೆ ಸಿಂಡಿಕೇಟ್ ಬ್ಯಾಂಕ್ ಹಾಗೂ ಶ್ರೀ ಕೆ.ಸುಬ್ರಹ್ಮಣ್ಯ ಆಯ್ಕೆ**

ಬೆಂಗಳೂರು –ಜುಲೈ 9;

ಎನರ್ಜಿ ಕ್ಷೇತ್ರದಲ್ಲಿ ಪ್ರತಿಷ್ಟಿತ ಗೌರವ ಎಂದು ಪರಿಗಣಿಸಲ್ಪಟ್ಟ "ಸೆಲ್ಕೋ ಸೂರ್ಯಮಿತ್ರ ಪ್ರಶಸ್ತಿ"ಗೆ ಈ ವರ್ಷ ನಾಡಿನ ಪ್ರತಿಷ್ಟಿತ ಬ್ಯಾಂಕ್ ಹಾಗೂ ಸೌರವಿದ್ಯುತ್ ಕ್ಷೇತ್ರಕ್ಕೆ ಆರ್ಥಿಕ ಉತ್ತೇಜನ ನೀಡುತ್ತ ಬಂದ ಸಿಂಡಿಕೇಟ್ ಬ್ಯಾಂಕ್ ಹಾಗೂ ಹೆಸರಾಂತ ಸೌರ ವಿದ್ಯುತ್ ಮಾರ್ಗದರ್ಶಿ ಶ್ರೀ ಕೆ. ಸುಬ್ರಹ್ಮಣ್ಯ, ಆಯ್ಕೆಯಾಗಿದ್ದಾರೆ.

ಸಿಂಡಿಕೇಟ್ ಬ್ಯಾಂಕ್ ದೇಶದ ಯಶಸ್ವೀ ಬ್ಯಾಂಕ್ ಗಳಲ್ಲಿ ಒಂದಾಗಿದ್ದು, ಕಳೆದ 22 ವರ್ಷಗಳಲ್ಲಿ ಇಂಧನ ಸುಸ್ಥಿರತೆಗಾಗಿ ಹಾಗೂ ಗ್ರಾಮೀಣ ಜನರ ಮತ್ತು ಸಮುದಾಯದ ಬೆಳಕಿಗಾಗಿ ಆರ್ಥಿಕ ಸಹಾಯ ಒದಗಿಸುತ್ತ ಬಂದಿದೆ. ಪ್ರಸ್ತುತ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಒ ಶ್ರೀ ಅರುಣ್ ಶ್ರೀವಾತ್ಸವ ರವರು ಬ್ಯಾಂಕಿನ ಈ ಧೋರಣೆಯನ್ನು ಇನ್ನೂ ಹೆಚ್ಚು ವಿಸ್ತರಿಸುವಲ್ಲಿ ಪ್ರಯತ್ನಿಸುತ್ತಿದ್ದು, ದೇಶದ ಇಂಧನ ಕೊರತೆ ನೀಗಿಸುವಲ್ಲಿ ಉತ್ತಮ ಪ್ರೋತ್ಸಾಹ ನೀಡುತ್ತಿದ್ದಾರೆ. ಅವರು ಬ್ಯಾಂಕಿನ ಪರವಾಗಿ ಈ ಪ್ರಶಸ್ತಿ ಸ್ವೀಕರಿಸಲಿದ್ದಾರೆ.

ಶ್ರೀ ಕೆ.ಸುಬ್ರಹ್ಮಣ್ಯರವರು, ಸೋಲಾರ್ ಕ್ಷೇತ್ರದ ಯಶಸ್ವೀ ಉದ್ಯಮ – ಸೋಲಾರ್ ಫಲಕಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಟಾಟಾ ಬಿಪಿ ಸಂಸ್ಥೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಸೇವೆ ಸಲ್ಲಿಸಿದವರು. ಈಗಲೂ ಹಲವು ಸೌರವಿದ್ಯುತ್ ಸಂಸ್ಥೆಗಳಿಗೆ ಮಾರ್ಗದರ್ಶಿಯಾಗಿದ್ದಾರೆ. ಉದ್ಯಮವನ್ನು ವ್ಯಾವಹಾರಿಕತೆಯ ಆಧಾರದ ಮೇಲೆ ನೋಡದೆ, ಜನರ ಅಗತ್ಯದ ಅರಿವು ಸಂಸ್ಥೆಯ ಮುಖ್ಯ ಗುರಿಯಾಗಬೇಕು ಎಂದು ಅವರು ಪ್ರತಿಪಾದಿಸುತ್ತ ಬಂದವರು.

ಈ ಹಿಂದೆ ಈ ಪ್ರಶಸ್ತಿಯನ್ನು ಎಸ್.ಕೆ.ಡಿ.ಆರ್.ಡಿ.ಪಿ. ಸಂಸ್ಥೆ, ಧರ್ಮಸ್ಥಳ, ಕೋಟ ಶ್ರೀನಿವಾಸ ಪೂಜಾರಿ, ಕುಂದಾಪುರ, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ –ಧಾರವಾಡ, ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ – ಬಳ್ಳಾರಿ, ಅರ್ಜುನ್ ಮೆಂಡಾ – ಮೆಂಡಾ ಫೌಂಡೇಶನ್– ಬೆಂಗಳೂರು, ಫಾದರ್ ಮಾರಿಯಾ ಜೂಲಿಯನ್, ಚಿತ್ರ ಡಾನ್‌ಬಾಸ್ಕೋ ಚಿತ್ರದುರ್ಗ ಇವರುಗಳಿಗೆ ನೀಡಲಾಗಿತ್ತು.

ದಿನಾಂಕ 16 ಜುಲೈ 2016, ಶನಿವಾರ, ಬೆಳಿಗ್ಗೆ 10.30 ಗಂಟೆಗೆ ಬೆಂಗಳೂರಿನ ಭಾರತ್ ಸೌಟ್ ಮತ್ತು ಗೈಡ್ ಸಭಾಂಗಣದಲ್ಲಿ ನಡೆಯುವ ಸೆಲ್ಕೋ ಸ್ಥಾಪನಾ ದಿನದ ಸಮಾರಂಭದಲ್ಲಿ ಮುಂಬೈನ ಸರ್ ದೊರಾಬ್‌ಜಿ ಟಾಟಾ ಟ್ರಸ್ಟ್‌ನ ಆಡಳಿತ ಟ್ರಸ್ಟಿ ಶ್ರೀ ಆರ್.ವೆಂಕಟರಮಣನ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಪ್ರಶಸ್ತಿ ಪ್ರದಾನ ಮಾಡಲಿರುವರು. ಮಣಿಪಾಲದ ಬಿವಿಟಿ ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ಶ್ರೀ ಕೆ. ಎಂ. ಉಡುಪ ಉಪಸ್ಥಿತರಿರುವರು ಹಾಗೂ ಸೆಲ್ಕೋ ಸಂಸ್ಥೆಯ ಚೇರಮನ್ ಡಾ. ಹರೀಶ ಹಂದೆ, ಅಧ್ಯಕ್ಷತೆ ವಹಿಸುವರು.

ಈ ಸಂದರ್ಭದಲ್ಲಿ ಸೆಲ್ಕೋ ಸಂಸ್ಥೆ ಪರ್ಯಾಯ ಬೆಳಕು, ಜೀವನಾಧಾರ, ಗ್ರಾಮೀಣ ಅಗತ್ಯ, ಶಿಕ್ಷಣ, ಹಿಂದುಳಿದ ಪ್ರದೇಶಗಳಲ್ಲಿ ಮಾಡಿದ ಪ್ರಯೋಗಗಳ ಕುರಿತಾದ ಪ್ರಾತ್ಯಕ್ಷಿಕೆ ನೀಡಲಾಗುವದು ಎಂದು ಸೆಲ್ಕೋ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಮೋಹನ್ ಭಾಸ್ಕರ್ ಹೆಗಡೆ ತಿಳಿಸಿದರು.